**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 827/2018** **CW**-3 **PW**-3

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶಾಂತಮ್ಮ |
| ಗಂಡನ ಹೆಸರುಃ | ಕೃಷ್ಣೇಗೌಡ |
| ವಯಸ್ಸುಃ | 50 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಗೂರನಹಳ್ಳಿ ಮಂಡಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ಮತ್ತು ಚಾಸಾ-2 ರವರ ಪರಿಚಯವಿದೆ.

ದಿಃ 17.03.2018 ರಂದು ಬೆಳಗ್ಗೆ 10.30 ರ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-2 ರವರು ಹಾಸನಕ್ಕೆ ಹೋಗಲು ಅವರ ಮನೆಯ ರಸ್ತೆಯಲ್ಲಿ ನಿಂತಿದ್ದಾಗ ಅಲ್ಲಿಗೆ ಚಾಸಾ-1 ರವರ ಗಂಡ ಅಲ್ಲಿಗೆ ಬಂದು ಚಾಸಾ-1 ರವರ ಬಳಿ ಇದ್ದ ಮಗುವನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದು, ಚಾಸಾ-1 ರವರು ಕೊಡುವುದಿಲ್ಲ ಎಂದಾಗ ಚಾಸಾ-1 ರವರ ಗಂಡ ಕಲ್ಲಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದಿರುತ್ತಾರೆ. ನಂತರ ಚಾಸಾ-2 ರವರು ಅಲ್ಲಿಗೆ ಬಂದು ಮಗುವನ್ನು ಕಿತ್ತುಕೊಂಡರು. ಆಗ ಆರೋಪಿ ಕೈಯಿಂದ ಚಾಸಾ-2 ರವರ ಬೆನ್ನಿಗೆ ಹೊಡೆದಿರುತ್ತಾರೆ. ನಾನು ಮತ್ತು ಚಾಸಾ-4 ರವರು ಜಗಳ ಬಿಡಿಸಿರುತ್ತೇವೆ. ನಂತರ ಆರೋಪಿ ಮಗುವನ್ನು ಕಿತ್ತುಕೊಂಡು ಹೊರುಟುಹೋಗಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ.

ಚಾಸಾ-1 ರವರ ಗಂಡನನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

ಸಾಕ್ಷಿ ನ್ಯಾಯಾಲಯದಲ್ಲಿರುವ ಮು ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರವರ ಗಂಡನ ಹೆಸರು ರವಿಕುಮಾರ್ ಎಂದರೆ ಸರಿ. ಅವರಿಬ್ಬರ ನಡುವೆ ಕೌಟುಂಬಿಕ ಕಲಹ ಇದ್ದು ಕೌಟುಂಬಿಕ ನ್ಯಾಯಾಲಯದಲ್ಲಿ ಪ್ರಕರಣಗಳು ಇವೆ ಎಂದರೆ ಸರಿ. ಆರೋಪಿ ಚಾಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿ ಚಾಸಾ-1 ರವರ ಕೈಯಿಂದ ಮೈಕೈ ಮೇಲೆ ಹೊಡೆದಿರುತ್ತಾರೆ. ಚಾಸಾ-2 ರವರನ್ನು ನೆಲಕ್ಕೆ ಬೀಳಿಸಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಪ್ರಾಣ ಬೆದರಿಕೆ ಸಹ ಹಾಕಿರುತ್ತಾರೆ ಎಂದರೆ ಸರಿ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಎನ್ ಆರ್ ರವರಿಂದ ಃ**

ನಮ್ಮ ಮನೆಯ 4 ಮನೆಗಳ ನಂತರ ಚಾಸಾ-1 ರವರ ಮನೆ ಇದೆ. ಚಾಸಾ-1 ಮತ್ತು ಆರೋಪಿಯ ನಡುವೆ ಏನು ಜಗಳ ಆಗಿದೆ ಎಂದು ಗೊತ್ತಿಲ್ಲ. ಸದರಿಯವರು ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ಅವರ ಮಗು ಈಗಲೂ ಆರೋಪಿಯ ಬಳಿ ಇದೆ ಎಂದರೆ ಸರಿ. ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುತ್ತಿದ್ದಾಗ ಅವರ ಮನೆಯಲ್ಲಿ ಗಲಾಟೆ ಆಗುತ್ತಿತ್ತು. ಈ ಅಂಶವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ಗಲಾಟೆ ಸಮಯದಲ್ಲಿ ಸುಮಾರು ಜನ ಇದ್ದು, ನಾನು ಮತ್ತು ಚಾಸಾ-4 ರವರು ಬಿಡಿಸಿರುತ್ತೇವೆ. ನಾನು ಮತ್ತು ಚಾಸಾ-1 ರವರು ಸಂಬಂಧಿಕರು ಎಂದರೆ ಸರಿಯಲ್ಲ. ಗಲಾಟೆ ನಡೆಯುತ್ತಿದ್ದ ಜಾಗಕ್ಕೂ ನಾನು ನಿಂತಿದ್ದ ಜಾಗಕ್ಕೂ ಕಡಿಮೆ ಅಂತರ ಇತ್ತು. ಅಲ್ಲಿಗೆ ಆರೋಪಿ ಮಾತ್ರ ಬಂದಿದ್ದರು. ಅಲ್ಲಿ ಸುಮಾರು ಎಷ್ಟು ಜನ ಸೇರಿದ್ದರು ಎಂದು ಹೇಳಲಾಗುವುದಿಲ್ಲ. ಕಲ್ಲಿನಿಂದ ಹೊಡೆದಿರುತ್ತಾರೆ

ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಬೆನ್ನಿನ ಯಾವ ಭಾಗಕ್ಕೆ ಹೊಡೆದಿರುತ್ತಾರೆ ಎಂದು ನೋಡಿಲ್ಲ. ಸದರಿ ಕಲ್ಲು ರಸ್ತೆಯಲ್ಲಿ ಇತ್ತು. ಸದರಿ ರಸ್ತೆ ಸೀಮಂಟ್ ರಸ್ತೆ ಎಂದರೆ ಸರಿ. ಇದೇ ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ಯಾವುದೇ ಗುರುತು ಇಟ್ಟುಕೊಂಡಿಲ್ಲ. ಕಲ್ಲಿನಿಂದ ಹೊಡೆದಿರುತ್ತಾರೆ. ಆದರೆ ಇದೇ ಕಲ್ಲು ಎಂದು ಗೊತ್ತಿಲ್ಲ. ಎಷ್ಟು ದಿನದ ನಂತರ ಪೋಲೀಸರು ಬಂದಿದ್ದರು ಎಂದು ಹೇಳಲಾಗುವುದಿಲ್ಲ. ಹೇಳಿಕೆಯನ್ನು ನಾನು ಠಾಣೆಯಲ್ಲಿ ನೀಡಿರುತ್ತೇನೆ. ಯಾವ ವಿಚಾರ ಮತ್ತು ಏನು ಬರೆದುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಈ ದಿನ ಚಾಸಾ-1 ರವರ ಜೊತೆ ಬಂದಿದ್ದೇನೆ ಎಂದರೆ ಸರಿ. ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**